13.	ದಕ್ಷಿಣ ಕನ್ನಡ ಜಿಲ್ಲೆ	45
14.	ಉಡುಪಿ ಜಿಲ್ಲೆ	38
15.	ಮಂಡ್ಯ ಜಿಲ್ಲೆ	54
16.	ಕೊಡಗು ಜಿಲ್ಲೆ	12
ಗುಲ್ಬರ್ಗಾ ವಿಭಾಗ		
17.	ಗುಲ್ಬರ್ಗಾ ಜಿಲ್ಲೆ	50
18.	ರಾಯಚೂರು ಜಿಲ್ಲೆ	29
19.	ಬೀದರ್ ಜಿಲ್ಲೆ	20
20.	ಬಳ್ಳಾರಿ ಜಿಲ್ಲೆ	29
21.	ಕೊಪ್ಪಳ ಜಿಲ್ಲೆ	24
ಬೆಳಗಾಂ ವಿಭಾಗ		
22.	ಬೆಳಗಾಂ ಜಿಲ್ಲೆ	40
23.	ಬಾಗಲಕೋಟೆ ಜಿಲ್ಲೆ	25
24.	ಬಿಜಾಪುರ ಜಿಲ್ಲೆ	20
25.	ಉತ್ತರ ಕನ್ನಡ ಜಿಲ್ಲೆ	23
26.	ಧಾರವಾಡ ಜಿಲ್ಲೆ	12
27.	ಗದಗ ಜಿಲ್ಲೆ	17
28.	ಹಾವೇರಿ ಜಿಲ್ಲೆ	24
	ಒಟ್ಟು	**907**

2039 (2197) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳಿಗೆ ಒಂದನೇ ತರಗತಿಯಿಂದಲೇ ಮಾತೃಭಾಷೆಯನ್ನು ಕಡ್ಡಾಯಗೊಳಿಸುವ ಯೋಜನೆಯನ್ನು ಅನುಷ್ಠಾನಕ್ಕೆ ತಂದಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಯಾವ ಶೈಕ್ಷಣಿಕ ವರ್ಷದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು. ದಿನಾಂಕ 21–10–2006 ರ ಸರ್ಕಾರದ ಆದೇಶ ಸಂಖ್ಯೆ ಇಡಿ 37 ಪಿಜಿಸಿ 2003, ರನ್ವಯ ರಾಜ್ಯ ಪಠ್ಯಕ್ರಮವನ್ನು ಅನುಸರಿಸುವ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವನ್ನಾಗಿ (2 ನೇ ಭಾಷೆಯಾಗಿ) ಒಂದನೇ ತರಗತಿಯಿಂದಲೇ ಕಡ್ಡಾಯವಾಗಿ ಕಲಿಸತಕ್ಕದೆಂದು ಆದೇಶಿಸಲಾಗಿದೆ.

ಆ) 2007–08 ನೇ ಶೈಕ್ಷಣಿಕ ವರ್ಷದಿಂದ ಕಾರ್ಯಗತಗೊಳಿಸಲಾಗುವುದು.

2046 (2437) ಡಾ॥ ಸುಧಾಕರ್ ಎಂ.ಪಿ. (ಚಿಂತಾಮಣಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕಿನ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಬೋಧಕರು ಹಾಗೂ ಬೋಧಕೇತರ ಖಾಲಿ ಇರುವ ಹುದ್ದೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರಗಳನ್ನು ನೀಡುವುದು);

ಆ) ಬಂದಿದ್ದಲ್ಲಿ, ಈ ಖಾಲಿ ಹುದ್ದೆಗಳಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು ಖಾಲಿ ಇರುವ ಬೋಧಕ : ಬೋಧಕೇತರ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಹುದ್ದೆಯ ಹೆಸರು	ಮಂಜೂರಾದ ಹುದ್ದೆ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆ	ಖಾಲಿ ಇರುವ ಹುದ್ದೆ
1. ಪ್ರಾಚಾರ್ಯರು ಗ್ರೇಡ್–1	01	––	01
2. ರಿಜಿಸ್ಟ್ರಾರ್	01	––	01
3. ಸಹಾಯಕರು ಹಾಗೂ ಸಹಾಯಕ ಉಪನ್ಯಾಸಕರ (ಎಲ್ಲಾ ವಿಭಾಗಗಳನ್ನೊಳಗೊಂಡಂತೆ)	57	37	20
4. ಶಿಕ್ಷಕರು	06	04	02
5. ಮೆಕ್ಯಾನಿಕ್	16	08	08
6. ಸಹಾಯಕರು	14	05	09
7. ಪ್ರ.ದ.ಸಹಾಯಕರು	06	03	03
8. ದ್ವಿ.ದ.ಸಹಾಯಕರು	03	––	03